CC

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 538
ಸದಸ್ಯರ ಹೆಸರು : ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11.07.2023
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಮಹಾನಗರ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ ನೀರು ಪೂರೈಕೆಯಾಗುತ್ತಿರುವ ಸರಾಸರಿ ಪ್ರಮಾಣ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರತಿ ನಿತ್ಯ 54 ಎಂ.ಎಲ್.ಡಿ ನೀರಿನ ಅವಶ್ಯಕತೆಯಿದ್ದು, ಬುಗುಡನಹಳ್ಳಿ ಜಲ ಸಂಗ್ರಹಗಾರದಲ್ಲಿ ನೀರನ್ನು ಸಂಗ್ರಹಿಸಿ ಪಿ.ಎನ್. ಆರ್. ಪಾಳ್ಯ ಜಲಶುದ್ದೀಕರಣ ಘಟಕ ಹಾಗೂ ಬುಗುಡನಹಳ್ಳಿ ಜಲಶುದ್ದೀಕರಣ ಘಟಕಗಳ ಮೂಲಕ ನಗರಕ್ಕೆ 49 ಎಂ.ಎಲ್.ಡಿ ನೀರನ್ನು ಹಾಗೂ ನಗರ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿಗಳ ಮೂಲಕ ಸರಾಸರಿ 5 ಎಂ.ಎಲ್.ಡಿ, ಒಟ್ಟು 54 ಎಂ.ಎಲ್.ಡಿ (135 ಎಲ್.ಪಿ.ಸಿ.ಡಿ) ನೀರನ್ನು ಮೇ-2023 ರ ಮಾಹೆಯ ಅಂತ್ಯದವರೆಗೂ ತುಮಕೂರು ನಗರಕ್ಕೆ ಸರಬರಾಜು ಮಾಡಲಾಗಿರುತ್ತದೆ.<br><br>ಪ್ರಸ್ತುತ ಜೂನ್-2023ನೇ ಮಾಹೆಯಿಂದ ಜಲಸಂಗ್ರಹಗಾರದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವ ಕಾರಣ ನೀರು ಶುದ್ದೀಕರಣ ಘಟಕಗಳ ಮೂಲಕ ಸರಾಸರಿ 38 ಎಂ.ಎಲ್.ಡಿ ಹಾಗೂ ಕೊಳವೆ ಬಾವಿಗಳ ಮೂಲಕ 5 ಎಂ.ಎಲ್.ಡಿ ಒಟ್ಟು 43 ಎಂ.ಎಲ್.ಡಿ (107.50 ಎಲ್.ಪಿ.ಸಿ.ಡಿ) ನೀರನ್ನು ತುಮಕೂರು ನಗರಕ್ಕೆ ಸರಬರಾಜು ಮಾಡಲಾಗಿರುತ್ತದೆ. |
| ಆ) | ತುಮಕೂರು ನಗರದಲ್ಲಿ ಕುಡಿಯುವ ನೀರಿನ ಅಭಾವ ಹೆಚ್ಚಾಗುತ್ತಿದ್ದು, ನಗರ ವಾಸಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ, ನಗರದ ನಿವಾಸಿಗಳಿಗೆ ನೀರು ಪೂರೈಕೆ ಮಾಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | • ತುಮಕೂರು ಮಹಾನಗರ ಪಾಲಿಕೆಗೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕಳೆದ 5 ವರ್ಷಗಳಲ್ಲಿ ಎಸ್.ಎಫ್.ಸಿ. ಕುಡಿಯುವ ನೀರಿನ ಯೋಜನೆಯಡಿ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ. |

(ರೂಲಕ್ಷಗಳಲ್ಲಿ)

| ಕ್ರ ಸಂ | ಸಾಲಿನವಿವರ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚಾದಅನುದಾನ |
|---|---|---|---|---|
| 1 | 2018-19 | 86.01 | 86.01 | 85.46 |
| 2 | 2019-20 | 22.00 | 22.00 | 22.00 |
| 3 | 2020-21 | 22.50 | 22.50 | 21.50 |
| 4 | 2021-22 | 18.00 | 18.00 | 17.86 |
| 5 | 2022-23 | 10.50 | 10.50 | 5.80 |

| | | |
|---|---|---|
| | | • ಬುಗುಡನಹಳ್ಳಿ ಜಲಸಂಗ್ರಹಗಾರದಲ್ಲಿ ನೀರು ಬರಿದಾಗುತ್ತಿದ್ದು, ಈ ಬಗ್ಗೆ ಜಲಸಂಗ್ರಹಗಾರಕ್ಕೆ ನೀರು ತುಂಬಿಸಲು ಕೋರಲಾಗಿ ದಿನಾಂಕ: 30-06-2023 ರಿಂದ ಹೇಮಾವತಿ ನಾಲೆಯ ಮೂಲಕ ಕೆರೆಗೆ ನೀರು ಹರಿಸಲು ಪ್ರಾರಂಭಿಸಲಾಗಿರುತ್ತದೆ. |

ಸಂಖ್ಯೆ: ನಅಇ 36 ತುಮಪಾ 2023(ಇ)

13/07/2023

(ಬಿ.ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು